# ಅವಧೂತ ಮತ್ತು ೨೪ ಗುರುಗಳು

**ಸ್ವಾಮಿ ಶಿವಕಾಂತಾನಂದ**

ದತ್ತಾತ್ರೇಯನನ್ನು ಗುರುರೂಪದ ಅವತಾರವೆಂದು ಪೂಜಿಸುವ ಪದ್ಧತಿ ನಮ್ಮಲ್ಲಿದೆ. ಅವಧೂತ ದತ್ತಾತ್ರೇಯನು ತನ್ನ ೨೪ ಮಂದಿ ಗುರುಗಳ ಬಗ್ಗೆ ಹೇಳುತ್ತ , ಗುರು ಹೇಗೆ ಪಶು, ಪಕ್ಷಿ , ಜಂತುಗಳ ರೂಪದಲ್ಲಿ ಕೂಡ ಪ್ರಕಟಗೊಳ್ಳಬಹುದು ಎಂದು ವಿವರಿಸುತ್ತಾನೆ. ಗುರುಪೂರ್ಣಿಮೆಯ ಸಂದರ್ಭದಲ್ಲಿ ಈ ಬಗ್ಗೆ ಬರೆದಿರುವ ಲೇಖಕರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು.

ಪರಾಪರ ವಿದ್ಯೆಯನ್ನು ನೀಡುವ ಗುರುಗಳಿಗೆ ಮತ್ತು ಗುರು ಪರಂಪರೆಗೆ ಎಷ್ಟು ಮಹತ್ವವಿದೆಯೋ ಅಷ್ಟೇ ಮಹತ್ವ ಅಂತರ್ಯಾಮಿ ಗುರುವಿಗೂ ಇದೆ ಎಂದು ತಿಳಿಸುವುದು 'ಅವಧೂತ ಗೀತಾ' – ಅವಧೂತೋಪಾಖ್ಯಾನ. ಸ್ವಪ್ರಯತ್ನ, ಇಂದ್ರಿಯ ಸಂಯಮ, ವಾಸನಾತ್ಯಾಗ ಮತ್ತು ವಿವೇಕ ಬುದ್ಧಿಯಿಂದ ಉಂಟಾದ ಅಂತಃಪ್ರಜ್ಞೆಯ ಜಾಗೃತಿಯಿಂದ ನಮ್ಮ ಅಂತಃಕರಣವೇ ನಮಗೆ ಗುರುವಾಗಿ ನಿಂತಾಗ ಹೇಗೆ ಪ್ರತಿಯೊಂದು ವಸ್ತು , ಸನ್ನಿವೇಶ ಮತ್ತು ದೃಶ್ಯಗಳಿಂದ ನಾವು ಶಿಕ್ಷಣ ಪಡೆಯಬಹುದೆಂದು 'ಅವಧೂತಗೀತೆ'ಯು ತಿಳಿಸುತ್ತದೆ.

ಬ್ರಹ್ಮ, ಮಹೇಶ್ವರಾದಿ ದೇವತೆಗಳೂ, ಅನೇಕ ದೇವತಾಗಣಗಳೂ ಭೂಮಿಗೆ ಇಳಿದು ದ್ವಾರಕೆಗೆ ಹೋಗಿ ಶ್ರೀಕೃಷ್ಣನನ್ನು ಪರಂಧಾಮಗೈಯುವಂತೆ ಪ್ರಾರ್ಥಿಸುತ್ತಾರೆ. ಈ ಸುದ್ದಿಯನ್ನು ತಿಳಿದು ಭಕ್ತಾಗ್ರೇಸರನಾದ ಉದ್ಧವನು ವಿರಹದಿಂದ ''ನಿನ್ನ ಚರಣ ಕಮಲಗಳನ್ನು ನಾನು ಕ್ಷಣಮಾತ್ರವೂ ಬಿಟ್ಟಿರಲಾರೆನು. ನನ್ನನ್ನೂ ನಿನ್ನ ಧಾಮಕ್ಕೆ ಕರೆದುಕೊಂಡು ಹೋಗು'' ಎಂದು ಅಂಗಾಲಾಚುತ್ತಾನೆ: **ನಾಹಂ ತವಾಂಘ್ರಿಕಮಲಂ ಕ್ಷಣಾರ್ಧಮಪಿ ಕೇಶವ । ತ್ಯಕ್ತುಂ ಸಮುತ್ಸಹೇ ನಾಥ ಸ್ವಧಾಮ ನಯ ಮಾಮಪಿ ॥** *(ಭಾಗವತ, ೧೧.೬.೪೩)* ಆ ಸಂದರ್ಭದಲ್ಲಿ ಕೃಪಾಸಿಂಧುವಾದ ಶ್ರೀಕೃಷ್ಣನು ಭಕ್ತನ ಸಾಂತ್ವನಕ್ಕಾಗಿ ಅವಧೂತನು ಹೇಗೆ ೨೪ ಗುರುಗಳಿಂದ ಆತ್ಮವಿದ್ಯೆಯನ್ನು ತಿಳಿದನು ಎಂಬುದನ್ನು ತಿಳಿಸುತ್ತಾನೆ. ಯಾವನು ಭಗವದ್ಗೀತೆಯಲ್ಲಿ '**ಉದ್ಧರೇದಾತ್ಮನಾತ್ಮಾನಂ**', '**ಬಂಧುರಾತ್ಮಾನಸ್ತಸ್ಯ**' *(ಗೀತಾ, ೬.೫-೬)* ಮುಂತಾಗಿ, 'ತನ್ನನ್ನು ತಾನು ತನ್ನಿಂದಲೇ ಉದ್ಧರಿಸಿಕೊಳ್ಳಬೇಕು, ಆತ್ಮನನ್ನು ಕುಗ್ಗಿಸಬಾರದು, ಆತ್ಮನೇ ಆತ್ಮನಿಗೆ ಮಿತ್ರನು'' ಮುಂತಾದ ಉಪದೇಶಗಳನ್ನು ನೀಡಿದನೋ ಅವನೇ ಇಲ್ಲಿ 'ವಿದ್ವಾಂಸರಾದವರು ತಾವೇ ತಮ್ಮನ್ನು ಸಂಸಾರವೆಂಬ ಅಶುಭದಿಂದ ಉದ್ಧರಿಸಿಕೊಳ್ಳುತ್ತಾರೆ... ಅವನ ಆತ್ಮನೇ ಗುರುವಾಗಿರುತ್ತಾನೆ.' (**ಸಮುದ್ಧರಂತಿ ಹ್ಯಾತ್ಮಾನಮಾತ್ಮನೈವಾಶುಭಾಶಯಾತ್.... ಆತ್ಮನೋ ಗುರುರಾತ್ಮೈವ ಪುರುಷಸ್ಯ ವಿಶೇಷತಃ ॥**) ಎನ್ನುತ್ತಾನೆ. *(ಭಾಗವತ, ೧೧.೭.೧೯-೨೦)*

ಹೊರಜಗತ್ತಿನಲ್ಲಿ ಎಲ್ಲರೂ ಕಾಣುವ ಸಾಮಾನ್ಯ ಕೀಟ, ಪ್ರಾಣಿ, ಪಕ್ಷಿ, ಸನ್ನಿವೇಶ, ವ್ಯಕ್ತಿಗಳನ್ನೇ ಗುರುವಾಗಿ ಸ್ವೀಕರಿಸಿ ಅಂತಃಶ್ಚೇತನವನ್ನು, ವಿವೇಕವನ್ನು ಜಾಗೃತಗೊಳಿಸಿ, ಕ್ಷುಲ್ಲಕವಾದ ಇಂದ್ರಿಯ ಸುಖವನ್ನು ತ್ಯಜಿಸಲು ಬೋಧಿಸುವ ಒಂದು ಸುಂದರವಾದ ಸಂನ್ಯಾಸಗೀತೆಯೇ ಈ ಅವಧೂತ ಗೀತೆ. ಅವಧೂತನು ಯದುರಾಜನಿಗೆ ನೀಡಿದ ಉತ್ತರವು ಇದಾದ್ದರಿಂದ ಭಾಗವತದ ೨ನೇ ಸ್ಕಂಧದಲ್ಲಿ ದತ್ತಾತ್ರೇಯನೇ ಯದು, ಕಾರ್ತವೀರ್ಯ ಮುಂತಾದವರನ್ನು ಉದ್ಧರಿಸಿದ ಎಂದು ಇದೆ. ಬ್ರಹ್ಮ-ವಿಷ್ಣು-ಮಹೇಶ್ವರರ ತ್ರಿಮೂರ್ತಿರೂಪನಾದ ದತ್ತಾತ್ರೇಯನೇ ಈ ಅವಧೂತನೆಂದು ತಿಳಿಯಬೇಕೆಂದು ನಿಶ್ಚಯಿಸಲಾಗಿದೆ. ಬಾಹ್ಯವಸ್ತುಗಳನ್ನು ಬುದ್ಧಿಯ ಮೂಲಕ ಬೆಳಗಿ ಜ್ಞಾನವನ್ನು ನೀಡುವುದು ಆ ಆತ್ಮಪ್ರಕಾಶವೇ. ಈ ಅಂತರ್ಯಾಮಿ ಪರಮಾತ್ಮನೇ ಜೀವಾತ್ಮನಿಗೆ ಗುರುವಾಗಿ ಉಪದೇಶಿಸಿದಂತೆ ನಿರೂಪಿಸಲಾಗಿದೆ. ಆದ್ದರಿಂದ ಸ್ವಪ್ರಯತ್ನ, ಸ್ವಪ್ರೇರಣೆಯ ಮಹತ್ವವನ್ನು ಹೇಳುವ ಈ ಉಪದೇಶವನ್ನು ಕೊಂಚ ನೋಡೋಣ.



ಶುದ್ಧ ಬುದ್ಧಿಯುಳ್ಳ ಯದುರಾಜನು ಅವಧೂತನಾಗಿ ಬಂದಿದ್ದ ದತ್ತಾತ್ರೇಯನನ್ನು ಯಥೋಚಿತವಾಗಿ ಸತ್ಕರಿಸಿ, ಕೈಜೋಡಿಸಿ, ವಿನಯದಿಂದ ಬಾಗಿ ಪ್ರಶ್ನೆಯನ್ನು ಕೇಳಿದಾಗ ಅವರು ಹೇಳುತ್ತಾರೆ, ''ನಾನು ನನ್ನ ಬುದ್ಧಿಯ ಮೂಲಕ ಹಲವಾರು ಗುರುಜನರನ್ನು ಆಶ್ರಯಿಸಿದ್ದೇನೆ. ಅವರಿಂದ ಶಿಕ್ಷಣ ಪಡೆದು ಮುಕ್ತ

ನಾಗಿ ಸ್ವೇಚ್ಛೆಯಿಂದ ಈ ಜಗತ್ತಿನಲ್ಲಿ ಸಂಚರಿಸುತ್ತಿದ್ದೇನೆ. ಆ ನನ್ನ ಗುರುಗಳ ಶುಭನಾಮಗಳನ್ನು ಹಾಗೂ ಅವರಿಂದ ನಾನು ಪಡೆದಿರುವ ಶಿಕ್ಷಣವನ್ನು ಹೇಳುವೆನು ಕೇಳು.''

೧) ಭೂಮಿ, ೨) ವಾಯು, ೩) ಆಕಾಶ, ೪) ನೀರು, ೫) ಅಗ್ನಿ, ೬) ಚಂದ್ರ, ೭) ಸೂರ್ಯ, ೮) ಪಾರಿವಾಳ, ೯) ಹೆಬ್ಬಾವು, ೧೦) ಸಮುದ್ರ, ೧೧) ಪತಂಗ, ೧೨) ದುಂಬಿ, ೧೩) ಆನೆ, ೧೪) ಜೇನು ಸಾಕುವವನು, ೧೫) ಜಿಂಕೆ, ೧೬) ಮೀನು, ೧೭) ಪಿಂಗಳಾ ಎಂಬ ವೇಶ್ಯೆ, ೧೮) ಸಮುದ್ರ ಗಿಡುಗ, ೧೯) ಮಗು, ೨೦) ಬಾಣ ಮಾಡುವ ಕಮ್ಮಾರ, ೨೧) ಸರ್ಪ, ೨೨) ಜೇಡರ ಹುಳು, ೨೩) ರೇಷ್ಮೆಹುಳು, ೨೪) ಕುಮಾರಿ.

**ಭೂಮಿ:** ಎಲ್ಲ ಪ್ರಾಣಿಗಳು ಓಡಾಡುತ್ತ ತುಳಿಯುತ್ತಿದ್ದರೂ ಕ್ಷಮಾನಿಧಿಯಾದ ಭೂಮಿಯು ಕಂಪಿಸದೇ ಇರುತ್ತಾಳೆ. ಪರೋಪಕಾರಕ್ಕಾಗಿ ಭೂಮಿಯ ವಿಕಾರವಾದ ಪರ್ವತ ವೃಕ್ಷಗಳು ಎಲ್ಲ ಪ್ರಾಣಿಗಳ ಆಶ್ರಯಸ್ಥಾನವಾಗಿದೆ. ಕ್ಷಮೆ, ಸಹನೆ, ಪರೋಪಕಾರದ ಶಿಕ್ಷಣಗಳನ್ನು ನಾನು ಭೂಮಿಯಿಂದ ಪಡೆದೆನು.

**ವಾಯು:** ಪ್ರಾಣವಾಯುವು ತನ್ನ ಉಳಿವಿಗೆ ಮಾತ್ರ ಆಹಾರವನ್ನು ಅಪೇಕ್ಷಿಸುತ್ತದೆ. ಎಷ್ಟು ಬೇಕೋ ಅಷ್ಟು ಮಾತ್ರ ಆಹಾರವನ್ನು ಸೇವಿಸಬೇಕೆಂದು ನಾನು ಪ್ರಾಣವಾಯುವಿನಿಂದ ಕಲಿತೆನು. ವಾಯುವು ಸ್ಮಶಾನ ಭೂಮಿಯಲ್ಲಿ, ಹೂವಿನ ತೋಟದಲ್ಲಿ ಬೀಸಿದರೂ ಅದರ ಮಾಲಿನ್ಯ, ಸುಗಂಧತ್ವವು ಶಾಶ್ವತವಾಗಿರುವುದಿಲ್ಲ. ಅವುಗಳ ಗುಣ-ದೋಷಗಳು ಅಂಟುವುದಿಲ್ಲ. ಜ್ಞಾನಿಯಾದವನು ಗುಣ-ದೋಷಗಳಿಂದ ಮುಕ್ತನಾಗಿರಬೇಕೆಂಬುದನ್ನು ವಾಯುವಿನಿಂದ ಕಲಿತೆನು. ಲೌಕಿಕವಾಗಿ ವ್ಯವಹರಿಸಿದರೂ ಗಂಧ ರಹಿತವಾದ ವಾಯುವಿನಂತೆ ನಿರ್ಲಿಪ್ತನಾಗುವ ಶಿಕ್ಷಣವನ್ನು ನಾನು ವಾಯುವಿನಿಂದ ಪಡೆದುಕೊಂಡಿರುತ್ತೇನೆ.

**ಆಕಾಶ:** ಆಕಾಶವು ಅತಿ ವಿಸ್ತಾರವಾಗಿದ್ದು ಎಲ್ಲೆಡೆ ವ್ಯಾಪಿಸಿದ್ದರೂ ಯಾವುದಕ್ಕೂ ಅಂಟಿಕೊಂಡಿರುವುದಿಲ್ಲ. ವಾಯುವಿನಿಂದ ಪ್ರೇರಿತವಾಗಿ ಮಿಂಚು ಮೇಘ ಮಳೆ ಆಕಾಶದಲ್ಲೇ ಉಂಟಾದರೂ ಈ ಕಾರ್ಯಗಳಿಗೂ ಆಕಾಶಕ್ಕೂ ಯಾವುದೇ ಸಂಬಂಧವಿಲ್ಲ. ಆಕಾಶವೆಂಬ ಗುರುವಿನಿಂದ ಅಖಂಡತೆ, ನಿಸ್ಸಂಗತೆ, ದೇಹಕ್ಕೂ ಆತ್ಮನಿಗೂ ಸಂಬಂಧವಿಲ್ಲವೆಂಬುದನ್ನು ಅರಿಯಬೇಕು.

**ನೀರು :** ನೀರು ಸ್ವಭಾವದಿಂದ ಸ್ವಚ್ಛ, ಮಧುರ, ಸ್ನಿಗ್ಧವಾಗಿ ಪ್ರಾಣಿಗಳನ್ನು ಹೇಗೆ ಪವಿತ್ರಗೊಳಿಸುವುದೋ ಹಾಗೆಯೇ ಸತ್ಪುರುಷರು ಸ್ವಭಾವದಿಂದಲೇ ಶುದ್ಧರೂ, ಸ್ನೇಹಪರರೂ, ಮಧುರ ಭಾಷಿಗಳೂ ಆಗಿರುತ್ತಾರೆ. ಹೀಗೆ ತೀರ್ಥದ ಗುಣವನ್ನು ಅನುಸರಿಸಿ ಮಾನವರು ಹೇಗಿರಬೇಕೆಂಬುದನ್ನು ನಾನು ತೀರ್ಥದಿಂದ ಕಲಿತೆನು.

**ಅಗ್ನಿ:** ಅಗ್ನಿಯು ಸರ್ವಭಕ್ಷಕನಾಗಿದ್ದರೂ ಅಭಕ್ಷ ಭೋಜನದ ದೋಷವು ಅವನಿಗಿಲ್ಲ. ಬ್ರಹ್ಮವಿದನು ತೇಜಸ್ವಿಯೂ ತಪಸ್ವಿಯೂ ಆಗಿದ್ದಾನೆ. ಅಗ್ನಿಯಂತೆ ದುರಾಹಾರ ಭಕ್ಷಣದ ದೋಷಕ್ಕೆ ಭಾಗಿಯಾಗುವುದಿಲ್ಲ. ಅಗ್ನಿಗೆ ತೇಜಸ್ಸೇ ಸ್ವಸ್ವರೂಪವಾಗಿರುವಂತೆ ಪರಮಾತ್ಮನಿಗೆ ಪರಬ್ರಹ್ಮತತ್ವವೇ ಸ್ವ-ಸ್ವರೂಪವಾಗಿದೆ.

**ಚಂದ್ರ :** ಚಂದ್ರನಿಗೆ ಶುಕ್ಲಪಕ್ಷದಲ್ಲಿ ವೃದ್ಧಿಯೂ, ಕೃಷ್ಣಪಕ್ಷದಲ್ಲಿ ಹ್ರಾಸವೂ ಎಂಬ ಕಲೆಯು ಉಂಟಾಗುತ್ತದೆ. ಇದು ಕಾಲನ ಪ್ರಭಾವದಿಂದಲೇ ಹೊರತು ವಾಸ್ತವಿಕವಾಗಿ ವೃದ್ಧಿ-ಕ್ಷಯಗಳು ಚಂದ್ರನಲ್ಲಿಲ್ಲ. ಚಂದ್ರಮಂಡಲವನ್ನು ಪರೀಕ್ಷಿಸುವ ವಿಜ್ಞಾನಿಗಳಿಗೆ ಚಂದ್ರನು ಕ್ಷೀಣಿಸುವುದೂ ಇಲ್ಲ; ವೃದ್ಧಿಸುವುದೂ ಇಲ್ಲ. ಹೀಗೆ ದೇಹ ವಿನಾಶವಾದರೂ ಆತ್ಮನಿಗೆ ನಾಶವಿಲ್ಲ ಎಂಬ ತತ್ತ್ವವನ್ನು ಸಾಧಕನು ಚಂದ್ರನ ಉದಾಹರಣೆಯಿಂದ ತಿಳಿಯಬೇಕು.

**ಸೂರ್ಯ:** ಸೂರ್ಯದೇವನು ತನ್ನ ಕಿರಣಗಳಿಂದ ನೀರನ್ನು ಸಂಗ್ರಹಿಸಿ ಕಾಲಕಾಲಕ್ಕೆ ವಿಸರ್ಜಿಸುವಂತೆ ಹೇಗೆ ಆಸಕ್ತಿ ಇಲ್ಲದೆ ಲೋಕೋಪಕಾರಕ್ಕಾಗಿ ಮಳೆಯನ್ನು ಉಂಟುಮಾಡುವನೋ, ಹಾಗೆ ಐಶ್ವರ್ಯದ ತ್ಯಾಗವನ್ನು ಯೋಗಿಯಾದವನು ಸೂರ್ಯನಿಂದ ಕಲಿಯಬೇಕು. ಅನೇಕ ಪಾತ್ರೆಗಳಲ್ಲಿ ಉಂಟಾಗುವ ಆ ಏಕ ಸೂರ್ಯನ ಅನೇಕ ಪ್ರತಿಬಿಂಬದಂತೆ ಆತ್ಮನಿಗೆ ಭೇದವೆಂಬುದು ಉಪಾಧಿಯಿಂದಲೇ ಹೊರತು ಸಹಜವಲ್ಲ ಎಂದು ತಿಳಿಯಬೇಕು.

**ಪಾರಿವಾಳ:** ಒಂದಾನೊಂದು ಕಾಲದಲ್ಲಿ ದೊಡ್ಡ ಆಲದ ಮರವೊಂದರಲ್ಲಿ ಪಾರಿವಾಳವು ತನ್ನ ಪತ್ನಿಯೊಡನೆ ಗಾಢವಾದ ದಾಂಪತ್ಯ ಜೀವನದಲ್ಲಿ ಒಡಗೂಡಿತ್ತು . ಕಾಲಾನಂತರ ಮರಿಗಳಾದವು. ಅದೇ ಜೀವನದ ಸರ್ವಸ್ವವೆಂದು ಭಾವಿಸಿ ಇವೆರಡೂ ಆನಂದಸಾಗರದಲ್ಲಿ ಮುಳುಗಿಹೋಗಿದ್ದವು. ತಂದೆ-ತಾಯಿಗಳು ಆಹಾರ ಸಂಚಯಕ್ಕೆ ಹೋಗಿದ್ದಾಗ ಈ ಮರಿಗಳು ಬೇಡನ ಗುಡಿಸಲ ಬಳಿಗೆ ಹಾರಿ ಹೋದಾಗ ಬೇಡನು ಒಡನೆಯೇ ಬಲೆ ಬೀಸಿದನು. ಮರಿಗಳನ್ನು ಬಲೆಯಲ್ಲಿ ಕಂಡು ದುಃಖಿಸುತ್ತಾ ತಾಯಿ ಪಾರಿವಾಳ ತಾನೂ ಬಲೆಯಲ್ಲಿ ಬಿತ್ತು . ಇದನ್ನು ಕಂಡ ಗಂಡು ಪಾರಿವಾಳವು ಪ್ರಲಾಪಿಸುತ್ತಾ ಅದೇ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿತು. ನಿರ್ದಯನಾದ ಬೇಡರವನು ಅದೃಷ್ಟ ಖುಲಾಯಿಸಿತೋ ಎಂಬಂತೆ ಬಲೆಯಿಂದ ಪಕ್ಷಿಗಳನ್ನು ಬಿಡಿಸಿಕೊಂಡು ಆನಂದದಿಂದ ಮನೆಯೊಳಗೆ ಹೋದನು. ಕಪೋತ ಪಕ್ಷಿಯಂತೆ ಸಂಸಾರದಲ್ಲಿಯೇ ಆಸಕ್ತನಾಗಿದ್ದರೆ ಅಂತಹ ಜೀವನವನ್ನು ಆರೂಢಚ್ಯುತ (ಮೇಲೇರಿ ಕೆಳಗೆ ಬಿದ್ದವನು) ಎಂದು ವಿದ್ವಾಂಸರು ತಿಳಿಯುತ್ತಾರೆ.

**ಹೆಬ್ಬಾವು:** ಅಜಗರ ವೃತ್ತಿಯೆಂದು ಪ್ರಸಿದ್ಧವಾಗಿರುವ ಸಂನ್ಯಾಸ ಧರ್ಮವು ಈ ದೃಷ್ಟಾಂತದಿಂದಲೇ ಬಂದಿದೆ. ಆಹಾರಕ್ಕೆ ಯಾವ ಪ್ರಯತ್ನಮಾಡದೆ ಸುಮ್ಮನೆ ಬಿದ್ದುಕೊಂಡಿರುವ ಹೆಬ್ಬಾವು ಆಹಾರವು ಸಿಕ್ಕದೆ ಇದ್ದರೆ ಪ್ರಾರಬ್ಧಕರ್ಮವೆಂದು ಭಾವಿಸಿ ನಿರಾಹಾರನಾಗಿಯೇ ಮಲಗಿರುತ್ತದೆ. ದೃಢವಾದ ಕರ್ಮೇಂದ್ರಿಯಗಳನ್ನು ಹೊಂದಿದ್ದರೂ ಅಯಾಚಿತ ಮನೋಭಾವನೆಯಿರಬೇಕೆಂಬುದನ್ನು ಹೆಬ್ಬಾವಿನಿಂದ ಈ ವ್ರತದ ತತ್ತ್ವವನ್ನು ಅರಿತುಕೊಂಡೆನು.



ದತ್ತಾತ್ರೇಯರು ಮತ್ತು ೨೪ ಗುರುಗಳು

**ಸಮುದ್ರ :** ಅಗಾಧ ಜಲರಾಶಿಯನ್ನು ಹೊಂದಿದ್ದರೂ ನಿಶ್ಚಲವಾದ, ಪ್ರಸನ್ನತೆ ಮತ್ತು ಗಾಂಭೀರ್ಯತೆಯುಳ್ಳ ಸಮುದ್ರದಂತೆ ಮುನಿಯಾದವನು ಇರಬೇಕು. ಅನಂತವಾದ ಕಡಲಿನಂತೆ ಅನಂತ ಪಾರವುಳ್ಳವನೂ ವಿಕಾರಯಿಲ್ಲದವನೂ ಆಗಿರಬೇಕು.

**ಪತಂಗ:** ತನ್ನ ಶರೀರವು ನಾಶವಾಗಿ ಹೋಗುವುದೆಂಬ ಅರಿವಿದ್ದರೂ ಪತಂಗವು ದೀಪವನ್ನು ಮುತ್ತಿಡಲು ಹೋಗಿ ಸಾಯುತ್ತದೆ. ಹಾಗೆಯೇ ಇಂದ್ರಿಯ ಸಂಯಮವಿಲ್ಲದ ಮೂಢನು ದೇವಮಾಯೆಯಿಂದ ನಿರ್ಮಿತವಾದ ಸ್ತ್ರೀಯ ಹಾವ-ಭಾವಗಳಿಂದ ಆಕರ್ಷಿತನಾಗಿ, ಅನುರಕ್ತನಾಗಿ ಮುಕ್ತಿಯನ್ನು ಹೊಂದಲು ಯತ್ನಿಸದೆ ಅಂಧತಮಸ್ಸಿನಲ್ಲಿ ಬಿದ್ದುಬಿಡುತ್ತಾನೆ.

**ಜೇನುಹುಳು:** ಜೇನುಹುಳುವು ಅನೇಕ ಪುಷ್ಪಗಳಿಗೆ ಹಾರಿ ಅವುಗಳಿಗೆ ಘಾಸಿಯಾಗದಂತೆ ಮಧುವನ್ನು ಸಂಗ್ರಹಿಸುವಂತೆ, ಮುನಿಯಾದವನು ಏಳು ಮನೆಗಳಿಂದ ಸಂಗ್ರಹಿಸಿ ತಂದು ಭುಂಜಿಸಬೇಕು. ನಾನಾ ಪ್ರಕಾರದ ಸಣ್ಣ ದೊಡ್ಡ ಪುಷ್ಪಗಳಿಂದಲೂ ದುಂಬಿಯು ಪುಷ್ಪರಸವನ್ನು ಸಂಗ್ರಹಿಸುವಂತೆ ಬುದ್ಧಿವಂತನಾದ ಮನುಷ್ಯನು ಚಿಕ್ಕ ದೊಡ್ಡ ಶಾಸ್ತ್ರಗಳ ಸಾರಭಾಗಗಳನ್ನು ಮಾತ್ರ ಸಂಗ್ರಹಿಸಬೇಕು. ಮುನಿಯ ಕೈಬೊಗಸೆಯೇ ಆಹಾರಪಾತ್ರೆಯಾಗಬೇಕು. ಹೊಟ್ಟೆಯೇ ಕಣಜವಾಗಿರಬೇಕು. ಭಿಕ್ಷುವು ತನಗೆ ಒಪ್ಪತ್ತಿಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರವೇ ಸಂಗ್ರಹಿಸಬೇಕು.

**ಆನೆ:** ಹುಲ್ಲಿನ ಮೆಣೆಯ ಮೇಲೆ ಇರಿಸಿದ, ಮರದಿಂದ ಮಾಡಿದ ಹೆಣ್ಣಾನೆಯ ಅಂಗಸಂಗವನ್ನು ಬಯಸಿ ಆನೆಯು ಖೆಡ್ಡಾದೊಳಗೆ ಬೀಳುವಂತೆ, ಮರದಿಂದ ಮಾಡಿದ ಹೆಣ್ಣುಗೊಂಬೆಯನ್ನು ಕೂಡ ಭಿಕ್ಷುವಾದವನು ಕಾಲಿನಿಂದ ಮುಟ್ಟಬಾರದು. ಬುದ್ಧಿವಂತನಾದ ಸಂನ್ಯಾಸಿಯು ಹೆಂಗಸರ ಸಂಸರ್ಗವನ್ನೇ ಮಾಡಬಾರದು.

*(ಶ್ರೀಮಾತೆಯವರೂ ಸಹ ಇದೇ ಉಪದೇಶವನ್ನು ಸ್ವಾಮಿ ಶಾಂತಾನಂದರಿಗೆ ನೀಡಿದ್ದಾರೆ –*

*ಪ್ರಶ್ನೆ: ಅಮ್ಮಾ, ಮಹಾವ್ಯಕ್ತಿಗಳೂ ಪ್ರಲೋಭನೆಗೆ ಒಳಗಾಗುವುದನ್ನು ಕಂಡು ನನಗೆ ಭಯವಾಗುತ್ತಿದೆ.*

*ಶ್ರೀಮಾತೆ: ಭೋಗವಸ್ತುಗಳು ಸುತ್ತಮುತ್ತಲಿರುವಾಗ ಸಹಜವಾಗಿ ಅವುಗಳ ಪ್ರಭಾವ ಅವರನ್ನು ಮೋಹಕ್ಕೊಳಪಡಿಸುತ್ತದೆ. ''ಮಗು, ಒಂದು ಸ್ತ್ರೀಯ ಆಕಾರವುಳ್ಳ ಮರದ ಬೊಂಬೆಯನ್ನು ಸಹ ಕಣ್ಣೆತ್ತಿ ನೋಡಬೇಡ.'')*

**ಜೇನು ಸಾಕುವವ:** ಅನೇಕ ಪುಷ್ಪಗಳಿಂದ ಮಕರಂದವನ್ನು ಸಂಗ್ರಹಿಸಿ ತಂದು ಕೂಡಿಟ್ಟ ಜೇನನ್ನು ಜೇನು ಸಾಕುವವನು ಕ್ಷಣ ಮಾತ್ರದಲ್ಲಿ ಅಪಹರಿಸಿ ಕೊಂಡುಹೋಗುವಂತೆ ಲೋಭಿಗಳು ಕೂಡಿಟ್ಟಿದ್ದನ್ನು ಬೇರೆಯವರು ಉಪಭೋಗಿಸುತ್ತಾರೆ. ಗೃಹಸ್ಥರು ಕಷ್ಟಪಟ್ಟು ಸಂಪಾದಿಸಿದರೂ ಅದರ ಫಲಭೋಕ್ತೃಗಳು ಬೇರೆಯವರೇ ಆಗಿರುತ್ತಾರೆ.

**ಮೀನು:** ಗಾಳದ ತುದಿಯಲ್ಲಿರುವ ಹುಳುವಿಗೋ, ಮಾಂಸದ ತುಂಡಿಗೋ ಆಸೆಪಟ್ಟು ಮೀನು ಜಿಹ್ವಾಚಾಪಲ್ಯದಿಂದ ತಿನ್ನಲು ಹೋಗಿ ಗಾಳದಲ್ಲಿ ಸಿಕ್ಕಿಹಾಕಿಕೊಂಡು ಸಾಯುತ್ತದೆ. ಅಂತೆಯೇ ಷಡ್ರಸಗಳಿಂದ ವಿಮೋಹಿತನಾದ ಮಾನವನು ಅತ್ಯಂತ ದುರ್ಜಯವಾದ ನಾಲಿಗೆಯ ಪ್ರಭಾವಕ್ಕೆ ಸಿಕ್ಕಿ ಮೃತ್ಯುವಶನಾಗುತ್ತಾನೆ. ನಂತರ ಅವಧೂತನು ಪ್ರಸಿದ್ಧವಾದ ಶ್ಲೋಕವನ್ನು ಉದ್ಧರಿಸುತ್ತಾನೆ. *( ಭಾಗವತ,೧೧-೮-೨೧)*

**ತಾವಜ್ಜಿತೇಂದ್ರಿಯೋ ನ ಸಾಧ್ವಿಜಿತಾನ್ಯೇಂದ್ರಿಯಃ ಪುಮಾನ್ ।**
**ನ ಜಯೇದ್ರಸನಂ ಯಾವಜ್ಜಿತಂ ಸರ್ವಂ ಜಿತೇ ರಸೇ ॥**

ಸ್ವಾಮಿ ತುರಿಯಾನಂದರಿಗೆ ಈ ಶ್ಲೋಕವು ಅಚ್ಚುಮೆಚ್ಚಿನದಾಗಿತ್ತು.

**ಪಿಂಗಲಾ ಎಂಬ ವೇಶ್ಯೆ :** ಇವಳು ಅತಿ ಹಣದ ಲೋಭದಿಂದ ರಾತ್ರಿಯೆಲ್ಲ ವಿಟರಿಗೆ ಕಾಯ್ದು ಆಯಾಸದಿಂದ ಈ ಇಂದ್ರಿಯ ಸುಖದ ಮೇಲೆಯೇ ಬೇಸತ್ತು ಪರಮ ವೈರಾಗ್ಯದಿಂದ ಗೀತೆಯನ್ನು ಹೇಳಲಾರಂಭಿಸಿದಳು. ''ವೈರಾಗ್ಯ ವೆಂಬುದು ಆಶಾ ಪಾಶಗಳ ಕುಠಾರಪ್ರಾಯವಾಗಿದೆ. ಎಲ್ಲರಿಗೂ ಅತ್ಯಂತ ಸಮೀಪದಲ್ಲಿರುವ, ಎಲ್ಲರಿಗೂ ಪತಿಯಾದ ಹೃದಯೇಶ್ವರನನ್ನು ಬಿಟ್ಟು, ಮಲಮೂತ್ರ ತುಂಬಿದ ಶರೀರವನ್ನು ರಮಿಸಲು ಬಯಸುತ್ತಿರುವೆನಲ್ಲ'' ಎಂದು ಹಲುಬುತ್ತಾಳೆ. ನಂತರ ಅವ ಧೂತನು, **'ಆಶಾ ಹಿ ಪರಮಂ ದುಃಖಂ ನೈರಾಶ್ಯಂ ಪರಮಂ ಸುಖಮ್ ।'** ಎಂದು ತಿಳಿಸುತ್ತಾನೆ. ಧನವಂತನಾದ ಕಾಂತನನ್ನು ಕೂಡಬೇಕೆಂಬ ಆಸೆಗಳನ್ನೆಲ್ಲಾ ಕತ್ತರಿಸಿ ಪಿಂಗಳೆಯು ಸುಖವಾಗಿ ಸುಪ್ಪತ್ತಿಗೆಯಲ್ಲಿ ಮಲಗಿಕೊಂಡಳೆಂದು ಹೇಳುತ್ತಾನೆ.

**ಕನ್ಯೆ :** ಯದುರಾಜ! ಆತ್ಮಕ್ರೀಡೆ, ಆತ್ಮರತಿಯಿಂದ ತಿರುಗಾಡಿಕೊಂಡಿರುವ ನಾನು ಕುಮಾರಿಯೊಬ್ಬಳಿಂದ ಕಲಿತ ಪಾಠವನ್ನು ತಿಳಿಸುತ್ತೇನೆ.

ಒಬ್ಬ ಬಡ ಗೃಹಸ್ಥನ ಮನೆಗೆ ಕನ್ಯಾರ್ಥಿಯಾಗಿ ಬೇರೆ ಕಡೆಯಿಂದ ಕನ್ಯಾರ್ಥಿಯಾಗಿ ಕೆಲವು ಗೃಹಸ್ಥರು ಬಂದರು. ಆ ಸಮಯದಲ್ಲಿ ಕನ್ಯೆಯನ್ನು ಬಿಟ್ಟು ಮನೆಯಲ್ಲಿ ಯಾರೂ ಇರಲಿಲ್ಲ. ಭೋಜನಕ್ಕೆ ಭತ್ತ ಕುಟ್ಟಲು ಆರಂಭಿಸಿದಾಗ ಅವಳು ಹಾಕಿಕೊಂಡಿದ್ದ ಅನೇಕ ಬಳೆಗಳು ಝಣ ಝಣ ಶಬ್ದ ಮಾಡಲಾರಂಭಿಸಿದವು. ಅತಿಥಿಗಳಿಗೆ ಭತ್ತ ಮಾಡುವುದು ತಿಳಿಯಬಾರದೆಂದು, ಶಂಖದ ಬಳೆಗಳನ್ನು ಒಂದೊಂದಾಗಿ ಒಡೆದು ಹಾಕಲು ಆರಂಭಿಸಿದಳು. ಕಡೆಗೆ ಎರಡು ಕೈಯಲ್ಲಿ ಒಂದೊಂದು ಬಳೆಗಳು ಮಾತ್ರ ಉಳಿದವು. ಅವು ಯಾವ ಶಬ್ದವನ್ನೂ ಮಾಡಲಿಲ್ಲ. 'ಏಕ ಏವ ಚರೇತ್ತಸ್ಮಾತ್ ಕುಮಾರ್ಯಾ ಇವ ಕಂಕಣಃ ।' ಏಕಾಕಿಯಾಗಿ ಸಂಚರಿಸುತ್ತಿದ್ದು ತಪಸ್ಸು ಮಾಡಿದರೆ ಯಾವ ಗಲಾಟೆಯೂ ಇಲ್ಲದಿರುವುದನ್ನು ಕುಮಾರಿಯಿಂದ ಕಲಿತೆನು ಎಂದು ಅವಧೂತನು ತಿಳಿಸುತ್ತಾನೆ.

**ಹಾವು:** ವಾಸಿಸಲೆಂದು ಗೆಜ್ಜಲಹುಳು ಕಟ್ಟಿದ ಹುತ್ತದಲ್ಲಿ ಹಾವು ಸೇರುವಂತೆ ಬೇರೆಯವರ ಮನೆಯನ್ನು ಸೇರಿಕೊಂಡು ಸುಖವಾಗಿರಬಹುದು.

**ಕಣಜ:** ಕಣಜವು ಬೇರೊಂದು ಹುಳುವನ್ನು ಸಂಗ್ರಹಿಸಿ ಸಾಯಿಸದೆ ಗೂಡಿನಲ್ಲಿಟ್ಟಾಗ ಈ ಕೀಟವು ಭಯದಿಂದ ಆ ಕಣಜವನ್ನು ಧ್ಯಾನಿಸುತ್ತ ಕಣಜವೇ ಆಗಿಬಿಡುವುದು. ಹಾಗೆ ಭಗವಂತನನ್ನು ಧ್ಯಾನಿಸುತ್ತಾ ಭಗವಂತನೇ ಆಗಿಬಿಡುತ್ತೇವೆ.

**ಉಪಸಂಹಾರ:** ಅವಧೂತನು ಕಪೋತ, ಮೀನು, ಜಿಂಕೆ, ಕುಮಾರಿ, ಗಜ, ಸರ್ಪ, ದೀಪದ ಹುಳು, ಕುರರ ಪಕ್ಷಿ (ಸಮುದ್ರ ಗಿಡುಗ) ಈ ಎಂಟು ಪ್ರಾಣಿಗಳಿಂದ ಸಂಗವನ್ನು ಬಿಡಬೇಕೆಂಬ ವಿಷಯಕ್ಕೆ ಗುರುಗಳು. ಗುರುಗಳು ಕಪೋತದಿಂದ ಪತ್ನಿ-ಪುತ್ರಾದಿ ಸಂಗವನ್ನು, ಮೀನಿನಿಂದ ನಾಲಿಗೆಯ ರಸಾಸಕ್ತಿಯನ್ನು, ಜಿಂಕೆಯಿಂದ ಶಬ್ದಾಸಕ್ತಿಯನ್ನು , ಕುಮಾರಿಯ ಕಂಕಣದಿಂದ ಸಜಾತೀಯ ಸಂಗವನ್ನು , ಗಜದಿಂದ ಸ್ಪರ್ಶಾಸಕ್ತಿಯನ್ನು, ಸರ್ಪದಿಂದ ಜನಸಂಗವನ್ನು, ದೀಪದ ಹುಳುವಿನಿಂದ ರೂಪಾಸಕ್ತಿಯನ್ನು, ಸಮುದ್ರ ಗಿಡುಗನಿಂದ ಪರಿಗ್ರಹವನ್ನು ಬಿಡಬೇಕೆಂದು ಕಲಿಸಿದವು. ಭ್ರಮರದಿಂದ ಮಧುಕರ ವೃತ್ತಿಯನ್ನು ಕಲಿಯಬೇಕು. ಜೇನುಕುರುಬನಿಂದ ಸಂಗ್ರಹವನ್ನು ಬಿಡುವುದನ್ನು ಕಲಿಯಬೇಕು. ಪಿಂಗಳೆಯಿಂದ ಧನದಾಸೆಯನ್ನು ಬಿಡಬೇಕು ಮತ್ತು ವೈರಾಗ್ಯವನ್ನು ಹೊಂದಬೇಕು ಎಂಬುದನ್ನು ಕಲಿಯಬೇಕು.

ಅಂತಿಮವಾಗಿ ಅವಧೂತನು ತನ್ನ ಅಭಿಪ್ರಾಯವನ್ನು ತಿಳಿಸುತ್ತಾನೆ. ''ಒಬ್ಬನೇ ಗುರುವಿನಿಂದ ಪಡೆಯುವ ಜ್ಞಾನವು ಸುಸ್ಥಿರವೂ ಆಗಿರುವುದಿಲ್ಲ, ಪುಷ್ಕಳವಿಚಾರವುಳ್ಳದ್ದೂ ಆಗಿರುವುದಿಲ್ಲ. ಈ ಪರಬ್ರಹ್ಮವಸ್ತುವು ಹಲವು ಬಗೆಯಾಗಿ ವರ್ಣಿಸಲ್ಪಟ್ಟಿದೆ.''

**ಬ್ರಹ್ಮೈತದದ್ವಿತೀಯಂ ವೈ ಗೀಯತೇ ಬಹುಧರ್ಷಿಭಿಃ ॥**

*(ಭಾಗವತ, ೧೧.೯.೩೧)*